Construction of Quarters by the Housing Board, Tumkur

498 Sri H. N. NANJE GOWDA (Arkalgud) [On behalf of Sri B. P. GANGADHAR (Tumkur)].—

Will the Minister for Health and Housing be pleased to state :—

(*a*) the number of quarters constructed by the Housing Board in Tumkur Town;

(*b*) if no quarters are constructed, the reasons for the same ;

(*c*) whether they are aware that most of the officials have been put to hardships due to the non-availability of the quarters;

(*d*) what action Government proposes to take in this matter ?

A.—Sri K. PUTTASWAMY (Minister for Health and Housing).—

(*a*) Nil

(*b*) Suitable land for construction of houses has not been availabl so far.

(*c*) and (*d*) The Housing Board proposes to take up construction of some houses as soon as the land is secured.

ಶ್ರೀ ಎಚ್ ಎನ್. ನಂಜೇಗೌಡ.– ಸ್ವಾಮಿ, ಮನೆಗಳನ್ನು ನಿರ್ಮಿಸಲು ಈವರೆಗೆ ನೂಕ್ಕ ಜಮೀನು ದೊರೆತಿರುವುದಿಲ್ಲವೆಂದು ಹೇಳಿದ್ದೀರಿ. ತುಮಕೂರು ಮತ್ತು ಬೆಂಗಳೂರು ಮಧ್ಯಯಿರುವ ಕ್ಯಾತಸಂದ್ರದ ಬಳಿ ಬೇಕಾದಷ್ಟು ಜಮೀನು ಇದೆ. ಆ ಜಮೀನನ್ನು ಸ್ವಾಧೀನಪಡಿಸಿಕೊಂಡು ಮನೆಗಳನ್ನು ಕಟ್ಟಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಜಮೀನು ದೊರಕಿಸಿಕೊಳ್ಳುವುದಕ್ಕೆ ಕ್ರಮ ಅನುಸರಿಸುತ್ತಿಲ್ಲ. ಜಮೀನು ದೊರಕಿಸಿಕೊಡಬೇಕೆಂದು ಪುರಸಭೆಯವರಿಗೆ ಹೇಳುತ್ತಿದ್ದೇವೆ. ಪುರ ಸಭೆಯವರು ಜಮೀನು ಕೊಂಡುಕೊಟ್ಟರೂ ಸಹ ನಾವು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆ. ಆದರೆ ಅವರು ಒದಗಿಸಿಕೊಟ್ಟಿಲ್ಲ. ನಾವು ಸಹ ಜಮೀನು ದೊರಕಿಸಿಕೊಳ್ಳುವ ವಿಚಾರದಲ್ಲಿ ತರದೂದಿನಲ್ಲಿದ್ದೇವೆ. ಬೇರೆ ಒಂದು ಜಮೀನಿನ ವಿಷಯದಲ್ಲಿ ಮಾತುಕತೆ ನಡೆಸುತ್ತಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ತುಮಕೂರಿನಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಬೇಕೆಂದು ಸ್ಕೀಮ್ ಇಟ್ಟುಕೊಂಡಿದ್ದೀರಿ, ಮತ್ತು ಈ ಬಗ್ಗೆ ಪ್ಲಾನ್ ಏನಾದರು ತಯಾರು ಮಾಡಿದ್ದೀರಾ ? ಮುನಿಸಿಪಾಲಿಟಿಯವರು ಎಷ್ಟು ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಕೇಳಿದ್ದಾರೆ ?

ಶ್ರೀ ಕೆ. ಪುಟ್ಟಸ್ವಾಮಿ.—ಮುನಿಸಿಪಾಲಿಟಿಯವರು ಕಟ್ಟಿಸಿಕೊಡಿ ಎಂದು ಹೇಳುತ್ತಾರೆ, ಆದರೆ ಅವರು ಜಮೀನು ಒದಗಿಸಿಕೊಡದಿದ್ದರೆ ಕಟ್ಟಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್. ಐ. ಸಿ. ಫಂಡ್‌ನಿಂದ 21 ರೆಂಟಲ್ ಕ್ವಾರ್ಟರ್ಸ್ ಕಟ್ಟಿದ್ದೇವೆ. ಅಯಾ ಊರಿನಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಬೇಕಾಗುತ್ತದೆ ಎಂಬ ಬಗ್ಗೆ ಅಂದಾಜನ್ನು ತಯಾರಿಸಿಲ್ಲ. ಎಲ್ಲಿ ಜಮೀನು ಸಿಗುತ್ತದೆಯೋ ಅಲ್ಲಿ ಮನೆಗಳನ್ನು ಕಟ್ಟಿಸುವುದಕ್ಕೆ ನಮ್ಮಲ್ಲಿ ಹಣವಿಲ್ಲದಿರುವುದರಿಂದ ಯಾವ ಯಾವ ಊರುಗಳಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಬೇಕೆಂಬ ವಿಷಯದಲ್ಲಿ ಇನ್ನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಎಂ.ಎಚ್. ಜಯಪ್ರಕಾಶ್‌ನಾರಾಯಣ್.—ತುಮಕೂರಿನಲ್ಲಿ ಮನೆಗಳನ್ನು ಕಟ್ಟಿಸಲು ಜಾಗ ಸಿಗಲಿಲ್ಲವೆಂದು ಹೇಳಿದಿರಿ. ಜಾಗ ದೊರಕಿಸಿಕೊಳ್ಳಲು ಯಾವ ರೀತಿ ಪರಿಶೀಲನೆ ನಡೆಸಿದ್ದೀರಿ ಮತ್ತು ಮುನಿಸಿಪಾಲಿಟಿಯವರು ರೆವಿನ್ಯೂ ಜಾಗವನ್ನು ಕೊಡಿಸುವುದಕ್ಕೆ ತಯಾರು ಇದ್ದರೂ ಸಹ ಸರ್ಕಾದದವರು ಹಣ ಒದಗಿಸದೇ ಇರುವುದು ಕಾರಣವಲ್ಲವೆ ?